

# ಈ ಪರಿಯ ಗುರು ಪ್ರೀತಿ

ಹಿಂದೂಸ್ತಾನಿ ಸಂಗೀತ ಗಾಯಕ ಕೀರ್ತಿಕುಮಾರ್ ಬಡಶೇಷಿ ತಮ್ಮ ಗುರು ಪಂ. ವಿನಾಯಕ ತೊರವಿ ಅವರ ಮೇಲೆ ಬಂದೀಶ್‌ಗಳನ್ನು ರಚಿಸಿ, ರಾಗ ಸಂಯೋಜಿಸಿ ಹಾಡಿದ ಧ್ವನಿಸಾಂದ್ರಿಕೆ ಇದೀಗ ಸಂಗೀತ ವಲಯದಲ್ಲಿ ಜನಪ್ರಿಯವಾಗಿದೆ. 'ಗುರುವಿಗೆ ತಕ್ಕ ಶಿಷ್ಯ'ನಂತಿರುವ ಕೀರ್ತಿಕುಮಾರ್ ಅವರ 'ಗುರು ಪ್ರೀತಿ' ಸಂಗೀತ ವಿದ್ಯಾರ್ಥಿಗಳಿಗೆ ಅನುಕರಣೀಯ ಮಾದರಿ.

■ **ಉಮಾ ಅನಂತ್**

ಮಹಾಭಾರತದ ಕರ್ತೃ ವೇದವ್ಯಾಸರನ್ನು ಸಂಗೀತದ ವಾಗ್ಗೇಯಕಾರರಾದಿಯಾಗಿ ಎಲ್ಲರೂ ಮಹಾನ್ ಗುರುವಿನ ಸ್ಥಾನದಲ್ಲಿರಿಸಿ ಗೌರವ, ನಮನ ಸಲ್ಲಿಸುವುದು ಅನಾದಿ ಕಾಲದಿಂದಲೂ ಮುಂದುವರಿಸಿಕೊಂಡು ಬಂದಿರುವ ಪದ್ಧತಿ. ಸಂಗೀತದಲ್ಲಿ ತಮ್ಮ ಮುಂದಿನ ಜೀವನದ ಹಾದಿಯನ್ನು ಸುಗಮವಾಗಿ ಮುನ್ನಡೆಸುವಂತಾಗಲು ಮಾರ್ಗದರ್ಶಕರಾಗಿರುವ ಗುರುವನ್ನು ಗೌರವಿಸುವುದು ಸಂಪ್ರದಾಯ ಕೂಡ. ಹೀಗಾಗಿ ಭಾರತೀಯ ಸಂಸ್ಕೃತಿಯಲ್ಲಿ ಗುರುವಿಗೆ ಮಹತ್ವದ ಸ್ಥಾನ. ಗುರುವಿನ ಮೇಲೆ ದಾಸಶ್ರೇಷ್ಠರೂ ಸೇರಿದಂತೆ ಅನೇಕ ವಿದ್ವಾಂಸರು ಕೃತಿಗಳನ್ನು, ಪದ್ಯಗಳನ್ನು ರಚನೆ ಮಾಡಿದ್ದಾರೆ. ಕರ್ನಾಟಕ ಸಂಗೀತ ಪಿತಾಮಹ ಪುರಂದರದಾಸರು ಗುರುವಿನ ಬಗ್ಗೆಯೇ 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ಹಾಡಿದ್ದಾರೆ.

ಸಂಗೀತದಲ್ಲೂ 'ಗುರು ಪರಂಪರೆ' ಅನಾದಿ ಕಾಲದಿಂದ ಬಂದದ್ದು. ಶಿಷ್ಯ, ಗುರುವಿಗೆ ತಕ್ಕವನಾಗಿ ಸಾಧನೆಯ ಹಾದಿಯಲ್ಲಿ ನಡೆದರೆ ಯಾವ ಗುರುವಿಗೆ ತಾನೆ ಖುಷಿಯಾಗುವುದಿಲ್ಲ? ಸಂಗೀತ ತ್ರಿಮೂರ್ತಿಗಳಲ್ಲಿ ಒಬ್ಬರಾದ ಸಂತ ತ್ಯಾಗರಾಜರು ತಮ್ಮ ಗುರು ಸೊಂಠಿ ವೆಂಕಟರಮಣ ಭಾಗವತರ ಶಿಷ್ಯರಾಗಿ, ತಮ್ಮ ಎಂಟನೇ ವಯಸ್ಸಿನಲ್ಲಿ ಶಿಷ್ಯವೃತ್ತಿಯನ್ನು ಆರಂಭಿಸಿದವರು, ಎರಡು ವರ್ಷಗಳ ಕಾಲಾವಧಿಯಲ್ಲಿ ಸಂಗೀತದಲ್ಲಿ ಪಾರಂಗತರಾದರು. ಗುರುಗಳು ಹೆಮ್ಮೆಯಿಂದ 'ದೊರಕುನಾ ಇಟುವಂಟಿ ಶಿಷ್ಯುಡು' (ಇಂತಹ ಶಿಷ್ಯನು ದೊರಕುವನೇ) ಎಂದು ಸಭಿಕರ ಮುಂದೆ ತ್ಯಾಗರಾಜರನ್ನು ಹೊಗಳಿದರು. ಒಬ್ಬ ಗುರುವಿನಿಂದ ಈ ರೀತಿ ಹೊಗಳಿಸಿಕೊಳ್ಳುವುದು ಶಿಷ್ಯನಾದವನಿಗೆ ಸಾಮಾನ್ಯದ ವಿಚಾರವಲ್ಲ.

ಗುರು–ಶಿಷ್ಯರ ನಡುವೆ ಸಂಗೀತದಂತೆ ಸುಮಧುರ ಸಂಬಂಧ ಏರ್ಪಡಬೇಕು, ಉತ್ತಮ ಬಾಂಧವ್ಯ ಇದ್ದರೆ ಸಂಗೀತ ಚೆನ್ನಾಗಿ ಶಿಷ್ಯಂದಿರಿಗೆ ಮನದಟ್ಟಾಗುತ್ತದೆ ಎಂಬ ಉದ್ದೇಶದಿಂದಲೇ ಪಂ. ವಿಷ್ಣು ದಿಗಂಬರ ಪಲುಸ್ಕರ್ ಹಾಗೂ ಪಂ. ವಿಷ್ಣು ನಾರಾಯಣ ಭಾತಖಂಡೆ ಅವರು ಗುರುಕುಲ ಪದ್ಧತಿಯನ್ನು ಹುಟ್ಟುಹಾಕಿ ಮುಂಬೈನಲ್ಲಿ ಗಂಧರ್ವ ಮಹಾವಿದ್ಯಾಲಯ ಆರಂಭಿಸಿದರು. ಗದಗದಲ್ಲಿ ಪುಟ್ಟರಾಜ ಗವಾಯಿಗಳು ಸ್ಥಾಪಿಸಿದ ವೀರೇಶ್ವರ ಪುಣ್ಯಾಶ್ರಮವೂ ಗುರು–ಶಿಷ್ಯ ಪರಂಪರೆಯಲ್ಲಿ ಸಂಗೀತವನ್ನು ಹೇಳಿಕೊಡುವುದರಲ್ಲಿ ಎತ್ತಿದಕೈ ಎನಿಸಿಕೊಂಡಿದೆ.

## ಗುರುವಿನ ಮೇಲೆ ಬಂದೀಶ್!

ಇವೆಲ್ಲ ಸಂಗೀತ ಚರಿತ್ರೆಯಲ್ಲಿ ಸಿಗುವ ಗುರುವಿನ ಗುಣಗಾನವಾದರೆ ಪ್ರಸ್ತುತ ಹಿಂದೂಸ್ತಾನಿ ಸಂಗೀತ ಗಾಯಕ ಬೆಂಗಳೂರಿನಲ್ಲಿರುವ ಕೀರ್ತಿಕುಮಾರ್ ಬಡಶೇಷಿ ತಮ್ಮ ಗುರುವಿನ ಮೇಲೆಯೇ 'ಗುರು ನಮನ' ಎಂಬ ಧ್ವನಿಸಾಂದ್ರಿಕೆ ಹೊರತಂದಿದ್ದಾರೆ. ಗುರುವಿನ ಮೇಲೆ ಸ್ವತಃ ಬಂದೀಶ್ ರಚಿಸಿ ರಾಗ ಸಂಯೋಜಿಸಿ ಕೀರ್ತಿಕುಮಾರ್ ಈ ಸೀಡಿಯಲ್ಲಿ ಹಾಡಿದ್ದಾರೆ.

'ಕೃಪಾ ಕರೊ ಗುರು ಮೋರೆ', 'ಗುರು ನಾರಾಯಣ, ಗುರು ಪರಮೇಶ್ವರ್', 'ಗುರು ಕಿ ಮಹಿಮ ಜಾನೋ' ಮುಂತಾದ ರಚನೆಗಳು ಧ್ವನಿಸಾಂದ್ರಿಕೆಯಲ್ಲಿದ್ದು ಗುರು ಭಕ್ತಿಯನ್ನು ಪ್ರತಿಧ್ವನಿಸುತ್ತದೆ. ಸುಪ್ರಸಿದ್ಧ ರಾಗಗಳಾದ ಬೈರಾಗಿಭೈರವ್, ಮಧುವಂತಿ, ಭೂಪಾಲಿ, ಪೂರಿಯ ಧನಾಶ್ರೀ, ಚಂದ್ರಕೌಂಸ್, ದರ್ಬಾರಿ, ರಾಗೇಶ್ರೀ ರಾಗಗಳಲ್ಲಿ ಈ ಬಂದೀಶ್‌ಗಳಿದ್ದು, ಕೇಳುಗರು ಮನಸೂರೆಗೊಳ್ಳುವಂತಿವೆ. ಟೈಮ್ಸ್ ಮ್ಯೂಸಿಕ್ ಈ ಸೀಡಿಯನ್ನು ಹೊರತಂದಿದೆ.

## ಎಂಜಿನಿಯರ್ ಪದವೀಧರ; ಉತ್ತಮ ಗಾಯಕ

ಕಿರಾಣಾ ಹಾಗೂ ಗ್ವಾಲಿಯರ್ ಘರಾಣೆ ಎರಡನ್ನೂ ಹದವಾಗಿ ಮಿಳಿತಗೊಳಿಸಿ ವಿಶಿಷ್ಟ ಶೈಲಿಯಲ್ಲಿ ಹಾಡುವ ಕೀರ್ತಿಕುಮಾರ್ ಮೂಲತಃ ಕಲಬುರ್ಗಿಯವರು. ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದಿರುವ ಅವರಿಗೆ ಬಾಲ್ಯದಿಂದಲೇ ಸಂಗೀತದತ್ತ ಸೆಳೆತ ಇತ್ತು. ಆಕಾಶವಾಣಿಯ ಬಿಹೈ ಗ್ರೇಡ್ ಕಲಾವಿದ. ಆಕಾಶವಾಣಿ ದೂರದರ್ಶನಗಳಲ್ಲಿ ಅನೇಕ ಕಾರ್ಯಕ್ರಮ ನೀಡಿದ್ದಾರೆ.

ಹಿಂದೂಸ್ತಾನಿ ಸಂಗೀತ ಗುರು ಪಂ. ವಿನಾಯಕ ತೊರವಿ ಅವರ ಅಚ್ಚುಮೆಚ್ಚಿನ ಶಿಷ್ಯರಾಗಿರುವ ಬಡಶೇಷಿ ಗುರುವಿನ ಹಾದಿಯಲ್ಲೇ ಸಾಗಿ ಸಂಗೀತದಲ್ಲಿ ವಿಶೇಷ ಛಾಪು ಮೂಡಿಸುತ್ತಿರುವ ಪ್ರತಿಭಾವಂತ ಗಾಯಕ.

ಐದು ವರ್ಷದ ಬಾಲಕನಿರುವಾಗಲೇ ಹಾಡಲಾರಂಭಿಸಿದ ಇವರು 'ಚೈಲ್ಡ್ ಪ್ರಾಡಿಜಿ'. ಆರಂಭಿಕ ಸಂಗೀತವನ್ನು ರಾಮಚಾರಿ ಜಾಲಿಹಾಳ್ ಹಾಗೂ ಗೀತಾ ಗಾಯತ್ರಿ ಚಕ್ರವರ್ತಿ ಅವರಲ್ಲಿ ಕಲಿತರು. ಮುಂದೆ ಸಂಗೀತ ಗುರು ಪಂ. ವಿನಾಯಕ ತೊರವಿ ಅವರು ಕೀರ್ತಿಕುಮಾರ್ ಅವರ ಸಂಗೀತ ಪ್ರತಿಭೆಗೆ ಸಾಣೆ ಹಿಡಿದರು. ತೊರವಿ ಗರಡಿಯಲ್ಲಿ ಕೀರ್ತಿ ಬೆಳಗಲಾರಂಭಿಸಿದರು. ಇಂದು ಖಯಾಲ್ ಗಾಯನದಲ್ಲಿ ಕೀರ್ತಿ